ದಿನಾಂಕಃ 31-10-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲು ವಾದಿ ಪರ ಶ್ರೀ ಸಿ.ಎಸ್.ಎಸ್. ವಕೀಲರಿಂದಃ**

6 ರಿಂದ 11 ನೇ ಪ್ರತಿವಾದಿಗಳೆಲ್ಲರೂ ಸೇರಿ ಒಂದೇ ಪ್ರತಿವಾದ ಪತ್ರವನ್ನು ಸಲ್ಲಿಸಿದ್ದೇವೆಂದರೆ ಸರಿ. ನನ್ನನ್ನು 2 ಹೆಸರಿನಿಂದ ಕರೆಯುತ್ತಾರೆಂದರೆ ಸರಿಯಲ್ಲ, ನನ್ನ ಹೆಸರು ಒಂದೇ ಆಗಿದ್ದು ಅದು ಸಣ್ಣಸ್ವಾಮಿ ಟಿ.ಆರ್. ನಾನು ಸಲ್ಲಿಸಿರುವ ಪ್ರತಿವಾದ ಪತ್ರದಲ್ಲಿ ನನ್ನ ಹೆಸರು ಟಿ.ಆರ್.ಪುಟ್ಟಸಾಮಿ ಅಲ್ಲ ನನ್ನ ಹೆಸರು ಸಣ್ಣಸ್ವಾಮಿ ಟಿ.ಆರ್. ಒಂದೇ ಹೆಸರು ಎಂದು ಬರೆಸಿರುತ್ತೇನೆಂದರೆ ಸರಿ. ನನ್ನ ಪ್ರತಿವಾದ ಪತ್ರದಲ್ಲಿ ನನ್ನನ್ನು ಎರಡು ಹೆಸರಿನಿಂದ ಕರೆಯುತ್ತಾರೆಂದು ಬರೆಸಿದ್ದರೆ ಅದು ತಪ್ಪು ಎಂದರೆ ಸರಿ. ನಾನು ಎಸ್.ಎಸ್.ಎಲ್.ಸಿ ವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ನಿಡಿ-2 ರಿಂದ 18 ನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ನಾನು ಪರಿಶಿಷ್ಟ ಜಾತಿ ಮಾದಿಗ ಆದಿ ಜಾಂಬವ

ಜನಾಂಗಕ್ಕೆ ಸೇರಿದವರು. ಆದಿ ಕರ್ನಾಟಕ ಮತ್ತು ಆದಿ ಜಾಂಬವ ಜನಾಂಗ ಬೇರೆ ಬೇರೆ ಎಂದರೆ ಸರಿ. ನಿಡಿ-7 ರಲ್ಲಿ ಕಾಣುವ ವ್ಯಕ್ತಿ ನಾನೇ ಎಂದರೆ ಸರಿ. ನಿಡಿ-7 ಶಾಲೆಗೆ ದಾಖಲಾಗಿರುವ ದಾಖಲಾತಿ ಎಂದರೆ ಸರಿ. ನಿಡಿ-8 ರಲ್ಲಿ ಕಾಣಿಸುತ್ತಿರುವುದು ನನ್ನ ತಮ್ಮ ಎಂದರೆ ಸರಿ. ನಿಡಿ-8 ಸಹ ಶಾಲೆಗೆ ದಾಖಲಾಗಿರುವ ದಾಖಲಾತಿ ಎಂದರೆ ಸರಿ. ನಿಡಿ-7 ರಲ್ಲಿ ನಾನು  ಆದಿ ಕರ್ನಾಟಕ ಜನಾಂಗ ಎಂದು, ನಿಡಿ-8 ರಲ್ಲಿ ಆದಿ ಜಾಂಬವ ಜನಾಂಗ ಮತ್ತು ನಿಡಿ-9 ರಲ್ಲೂ ಸಹ ಆದಿ ಜಾಂಬವ ಜನಾಂಗ ಎಂದು ನಮೂದು ಇದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸುಮಾರು 10 ವರ್ಷದಿಂದ ಆದಿ ಕರ್ನಾಟಕ ಜನಾಂಗ ಮತ್ತು ಆದಿ ಜಾಂಬವ ಜನಾಂಗ ಬೇರೆ ಬೇರೆ ಆಗಿರುತ್ತದೆ, ಹಿಂದೆ ಒಂದೇ ಆಗಿತ್ತು ಎಂದು ನುಡಿಯುತ್ತಾರೆ. ಸದರಿ 2 ಜನಾಂಗ ವ್ಯತ್ಯಾಸ ಅನಾದಿಕಾಲದಿಂದಲೂ ಇರುತ್ತದೆಂದರೆ ಸರಿ. ನನಗೆ ಪ್ರಸ್ತುತ 50 ವರ್ಷ. 50 ವರ್ಷದ ಹಿಂದೆ 2 ಜನಾಂಗಗಳು ಒಂದೇ ಆಗಿತ್ತು ಎಂದರೆ  ಸರಿ. ರಾಮಯ್ಯನವರಿಗೆ ಎರಡನೇ ಮದುವೆ ಆಗಿರುವ ಬಗ್ಗೆ ಯಾವುದೇ ದಾಖಲೆಯನ್ನು ನಾನು ನ್ಯಾಕ್ಕೆ ಹಾಜರುಪಡಿಸಿರುವುದಿಲ್ಲ. ಹಳ್ಳಿಗಳಲ್ಲಿ ರಾಮಯ್ಯ, ನಂಜಯ್ಯ, ಜವರಯ್ಯ ಎನ್ನುವ ಒಂದೇ ಹೆಸರಿನ ಅನೇಕ ಜನ ಇರುತ್ತಾರೆಂದರೆ ಸರಿ. ಮೊದಲನೇ ವಾದಿಯ ಗಂಡ ಎಳವಯ್ಯನವರ ಮಗ ಎಂದರೆ ಸರಿ. ರಾಮಯ್ಯ ನವರಿಗೆ ಇಬ್ಬರು ಹೆಂಡತಿಯರಿದ್ದರು ಎಂದು ತೋರಿಸುವ ಒಂದೇ ದಾಖಲೆಯನ್ನು ನ್ಯಾಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ವಕೀಲರಿಗೆ ನೀಡಿರುತ್ತೇನೆ ನ್ಯಾಯಾಲಯದ ಕಡತದಲ್ಲಿ ಇಲ್ಲ ಎಂದು ನುಡಿಯುತ್ತಾರೆ. ಆದಕಾರಣ ರಾಮಯ್ಯನವರಿಗೆ ಇಬ್ಬರು ಹೆಂಡತಿಯರು ಎಂಬ ಅಂಶ ಸುಳ್ಳು ಎಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ನೀಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.